# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 116
ಉತ್ತರಿಸಬೇಕಾದ ದಿನಾಂಕ - 10.07.2018 (ನಗರಾಭಿವೃದ್ಧಿ ಇಲಾಖೆಯಿಂದ ವರ್ಗಾವಣೆ)
ಸದಸ್ಯರ ಹೆಸರು - ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಕೊಳಗೇರಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ 2397 ಕೊಳೆಗೇರಿ ಪ್ರದೇಶಗಳನ್ನು ಕರ್ನಾಟಕ ಕೊಳಚೆ ಪ್ರದೇಶಗಳ(ಅಭಿವೃದ್ಧಿ ಮತ್ತು ನಿರ್ಮೂಲನೆ)ಕಾಯ್ದೆ, 1973ರಡಿ ಅಧಿಕೃತವಾಗಿ ಘೋಷಿಸಲಾಗಿದೆ.<br>ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. |
| ಆ) | ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಸರ್ಕಾರ ಯಾವ ಸೌಲಭ್ಯಗಳನ್ನು ನೀಡುತ್ತಿದೆ; | ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಕೊಳಚೆ ಸುಧಾರಣೆ ಯೋಜನೆಯಡಿ ಮೂಲಭೂತ ಸೌಲಭ್ಯಗಳನ್ನು ಹಾಗೂ ವಿವಿಧ ವಸತಿ ಯೋಜನೆಗಳಡಿ(ಹುಡ್ಕೋ, ವಾಂಬೇ, ನರ್ಮ್-ಬಿ.ಎಸ್.ಯು.ಪಿ. ಮತ್ತು ಐ.ಹೆಚ್.ಎಸ್.ಡಿ.ಪಿ., ರಾಜೀವ್ ಆವಾಸ್ ಯೋಜನೆ ಹಾಗೂ ಪ್ರಧಾನ ಮಂತ್ರಿ ಆವಾಸ್ ಯೋಜನೆ)ಮೂಲಭೂತ ಸೌಲಭ್ಯಗಳೊಂದಿಗೆ ಮನೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ. |
| ಇ) | ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಯುವಕರಿಗೆ ಉದ್ಯೋಗ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಯುವಕರಿಗೆ ಉದ್ಯೋಗ ಪಡೆಯಲು ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐ.ಇ.ಸಿ) ಕಾರ್ಯಕ್ರಮಗಳಡಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |
| ಈ) | ಕೊಳೆಗೇರಿಗಳಲ್ಲಿ ವಾಸಿಸುತ್ತಿರುವವರಿಗೆ ವಸತಿ ವ್ಯವಸ್ಥೆ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಇದುವರೆವಿಗೆ ಎಷ್ಟು ಮನೆಗಳನ್ನು ನಿರ್ಮಿಸಿ ಕೊಳಗೇರಿ ನಿವಾಸಿಗಳಿಗೆ ಹಂಚಲಾಗಿದೆ? | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಕೊಳೆಗೇರಿ ನಿವಾಸಿಗಳಿಗೆ ವಿವಿಧ ವಸತಿ ಯೋಜನೆಗಳಾದ ಹುಡ್ಕೋ ವಸತಿ ಯೋಜನೆಯಡಿ 30,460 ಮನೆಗಳು, ವಾಂಬೇ ವಸತಿ ಯೋಜನೆಯಡಿ 34,538 ಮನೆಗಳು, ಎಸ್.ಸಿ.ಪಿ. ಯೋಜನೆಯಡಿ 3,080 ಮನೆಗಳು, ನರ್ಮ್-ಬಿ.ಎಸ್.ಯು.ಪಿ ಯೋಜನೆಯಡಿ- 24,508 ಮನೆಗಳು, ನರ್ಮ್-ಐ.ಹೆಚ್.ಎಸ್.ಡಿ.ಪಿ. ಯೋಜನೆಯಡಿ 17,237 ಮನೆಗಳು, ರಾಜೀವ್ ಆವಾಸ್ ಯೋಜನೆಯಡಿ 19897 ಮನೆಗಳು ಒಟ್ಟು 1,29,720 ವಸತಿ ವ್ಯವಸ್ಥೆಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.<br>ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಿರ್ಮಿಸುತ್ತಿರುವ ಮನೆಗಳ ವಿವರ ಕೆಳಕಂಡಂತಿದೆ. |

| ಹಂತಗಳು | ಮಂಜೂರಾಗಿರುವ ಮನೆಗಳ ಸಂಖ್ಯೆ | ಪೂರ್ಣಗೊಂಡಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ | ಷರಾ |
|---|---|---|---|---|
| 1ನೇ ಹಂತ | 16293 | 217 | 217 | ಕಾಮಗಾರಿ ಪ್ರಗತಿಯಲ್ಲಿವೆ |
| 2ನೇ ಹಂತ | 9741 | - | - | |
| 3ನೇ ಹಂತ | 49368 | - | - | ಕಾಮಗಾರಿ ಪ್ರಾರಂಭಿಸಲಾಗಿದೆ/ ಟೆಂಡರ್ ಪ್ರಗತಿಯಲ್ಲಿವೆ |
| 4ನೇ ಹಂತ | 768 | - | - | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| 5ನೇ ಹಂತ | 6949 | - | - | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| ಒಟ್ಟು | 83,119 | 217 | 217 | - |

ಸಂಖ್ಯೆ: ವಇ 07 ಕೊಮಂವಿ 2018

(ಯು.ಟಿ. ಅಬ್ದುಲ್ ಖಾದರ್)
ವಸತಿ ಸಚಿವರು.

## ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಕೊಳಗೇರಿ ಪ್ರದೇಶಗಳ ಸಂಖ್ಯೆ |
|---|---|---|
| 1 | 2 | 3 |
| 1 | ಬೆಂಗಳೂರು ನಗರ | 387 |
| 2 | ಬೆಂಗಳೂರು ಗ್ರಾಮಾಂತರ | 31 |
| 3 | ಬಾಗಲಕೋಟೆ | 64 |
| 4 | ಬಳ್ಳಾರಿ | 152 |
| 5 | ಬೆಳಗಾವಿ | 99 |
| 6 | ಬೀದರ್ | 66 |
| 7 | ಚಿಕ್ಕಬಳ್ಳಾಪುರ | 31 |
| 8 | ಚಿಕ್ಕಮಗಳೂರು | 50 |
| 9 | ಚಿತ್ರದುರ್ಗ | 74 |
| 10 | ಚಾಮರಾಜನಗರ | 62 |
| 11 | ದಾವಣಗೆರೆ | 85 |
| 12 | ಧಾರವಾಡ | 90 |
| 13 | ದಕ್ಷಿಣ ಕನ್ನಡ | 18 |
| 14 | ಗದಗ | 88 |
| 15 | ಹಾಸನ | 109 |
| 16 | ಹಾವೇರಿ | 57 |
| 17 | ಕಲಬುರಗಿ | 116 |
| 18 | ಕೊಡಗು | 11 |
| 19 | ಕೋಲಾರ | 53 |
| 20 | ಕೊಪ್ಪಳ | 47 |
| 21 | ಮಂಡ್ಯ | 55 |
| 22 | ಮೈಸೂರು | 104 |
| 23 | ರಾಯಚೂರು | 72 |
| 24 | ರಾಮನಗರ | 39 |
| 25 | ಶಿವಮೊಗ್ಗ | 172 |
| 26 | ತುಮಕೂರು | 96 |
| 27 | ಉತ್ತರ ಕನ್ನಡ | 33 |
| 28 | ಉಡುಪಿ | 26 |
| 29 | ವಿಜಯಪುರ | 71 |
| 30 | ಯಾದಗೀರ್ | 39 |
|  | Total | 2397 |